


### ಚಳಿ ಚಳಿ

ಚಳಿ ಚಳಿ ಎಂದು ಕಂಬಳಿ ಹೊದ್ದು ಕೂರುವ ಕಾಲ ಈಗ ಹೋಗಿ ಬಿಟ್ಟಿರುವುದರಿಂದ ಸುಧಾ ಹೆಗಡೆ ಅವರ ಎಲ್ಲಿದೆ ಚಳಿ? (ಸುಧಾ 26.11.09) ಬರಹ ಸಕಾಲಿಕವಾಗಿತ್ತು. ಡಾ.ಕೆ.ಎಸ್.ಚೈತ್ರ ಅವರ ಚಳಿಗಾಲದ ರೋಗಗಳು ಹಾಗೂ ಡಾ. ಎಚ್.ಎಸ್.ಪ್ರೇಮ ಅವರ ಚಳಿಗಾಲದ ಆಹಾರ ಉಪಯುಕ್ತ ಮಾಹಿತಿ ನೀಡಿವೆ.

ಪಿ.ಗೋವಿಂದರಾಜ್, ಶಿವಮೊಗ್ಗ/ ಬಿ.ಎಸ್.ರಮೇಶ್, ಬೆಂಗಳೂರು/ ಮಹಾವೀರ ಕಾಸಾರ, ಚನ್ನಗಿರಿ/ ಎಚ್.ಆನಂದಕುಮಾರ್, ಚಿತ್ರದುರ್ಗ/ ಡಿ.ಆರ್.ಮಂಜುನಾಥ, ದೇಬೂರು

### ಭಕ್ತಿಯ ಮಹಾಪೂರ

ಮಕ್ಕಾದಲ್ಲಿ ಮಂಡಿಯೂರಿ ನಮಾಜ್ ಮಾಡುವ ಮಾನವ ಸಾಗರವನ್ನು ನೋಡಿ ಬೆಚ್ಚಿಬಿದ್ದೆ. ಎಂತಹ ಭಕ್ತಿ!

-ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ಮನಸೂರೆ

ತಂಜಾವೂರು ಶೈಲಿಯ ವರ್ಣಚಿತ್ರ ಹಾಗೂ ಡಾ. ಜಿ.ಎಸ್. ಅಶ್ವತ್ಥ್ ಕುಮಾರ್ ಅನುಭವದ ಬರಹ ಮನಸೂರೆಗೊಂಡಿತು.

-ನೆ.ಲ. ರಾಂ, ಬೆಂಗಳೂರು

### ಗಮನ ಅಗತ್ಯ

‘ಕೆಮ್ಮು–ಅಸ್ತಮಾ ಇರಬಹುದೇ’ ಮತ್ತು ‘ವೀಸಿಂಗ್’– ಮಕ್ಕಳಿರುವ ಎಲ್ಲ ತಂದೆ ತಾಯಿಯರೂ ಗಮನದಲ್ಲಿಡಬೇಕಾದ ಅತಿ ಮುಖ್ಯ ಬರಹ.

-ನೆ.ಗೋ.ಭ., ಕುಕ್ಕೆಸುಬ್ರಹ್ಮಣ್ಯ

### ಉತ್ತರ ಸರಿಯೇ?

ನ.26ರ ಸುಧಾ ಸಂಚಿಕೆಯ ‘ಕಾಮನಬಿಲ್ಲು’ ವಿಭಾಗದ ‘ಬುದ್ಧಿಗೆ ಗುದ್ದು’ ನಲ್ಲಿ ಚಪ್ಪಲಿ ಸ್ಟ್ಯಾಂಡ್‌ನ ಮೂಲ ಬೆಲೆ ರೂ. 2,000 ಎಂದು ಹೇಳಿದೆ. ಆದುದರಿಂದ ಮಾರಾಟದ ಚೀಟಿಯಲ್ಲಿ ತೋರಿಸಿದ ಬೆಲೆ ರೂ. 2,500 ಆಗುತ್ತದೆ. (ಶೇಕಡಾ 25ರಷ್ಟು ಹೆಚ್ಚು).

ಬಳಿಕ ಮಾರಾಟಗಾರ ಶೇಕಡಾ 25ರಷ್ಟು ಕಡಿಮೆ ಮಾಡಿ ಹೊಸ ಚೀಟಿ ಕಟ್ಟಿದ. ಇದರ ಪ್ರಕಾರ ಮಾರಾಟದ ಬೆಲೆ ರೂ. 1,875 ಆಗುತ್ತದೆ. (2500–625) ಆದರೆ ಉತ್ತರವನ್ನು ರೂ. 2,000 ಎಂದೇ ತೋರಿಸಲಾಗಿದೆ!

-ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಮಾತೇ ಮುತ್ತು

ವಿಚಾರ ಲಹರಿ ಪುಟದಲ್ಲಿ ಮೂಡಿಬರುತ್ತಿರುವ ‘ಮಾತೇ ಮುತ್ತು’ ಬಹಳ ಉಪಯುಕ್ತ.

- ಆರ್. ಕೃಷ್ಣಮೂರ್ತಿ, ಮಂಡ್ಯ



### ಚರಿತ್ರೆ ರೋಚಕ ಮಾಡಿದ ಕಲಾಕಾರ

16 ವಾರಗಳ ಕಾಲ ಧಾರಾವಾಹಿಯಾಗಿ ಮೂಡಿಬಂದ ಕೆ.ಎನ್.ಗಣೇಶಯ್ಯನವರ ‘ಚಿತಾದಂತ’ ರೋಚಕವಾಗಿತ್ತು. ಅಂತಿಮ ರಹಸ್ಯ ಮಾತ್ರ ನವಿರಾದ ಮುಸುಕಿನೊಳಗೆ ಉಳಿದುಬಿಡುತ್ತದೆ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ ಮಠ/ ಡಿ.ಎಸ್.ಪಂಕಜ ಸುಬ್ರಮಣ್ಯಂ,

ವರ್ತಮಾನದಿಂದ ಚರಿತ್ರೆಯ ಚಿಂತನೆಗೆ ಹಚ್ಚುವ ಗಂಭೀರ ವಸ್ತುವನ್ನೊಳಗೊಂಡಿದ್ದರೂ ಕಾದಂಬರಿ ರಂಜಿಸಿದೆ.

ಎಸ್.ಲಕ್ಷ್ಮಿನರಸಿಂಹ, ಚಾಮರಾಜನಗರ/ ಡಾ.ಎಸ್.ರಾಜಶೇಖರ್, ಕುಕ್ಕೆ ಸುಬ್ರಮಣ್ಯ

ಅಷ್ಟು ದೊಡ್ಡ ಕಾದಂಬರಿ ಓದುವುದು ನನಗೆ ಕಷ್ಟ. ಅಮ್ಮನಿಗೆ ಓದಿ ಹೇಳುವಂತೆ ದುಂಬಾಲು ಬೀಳುತ್ತಿದ್ದೆ. ಕೇಳುತ್ತ ಹೋದಂತೆ ಇತಿಹಾಸದ ಬಗ್ಗೆ ಅಪಾರ ಪ್ರೀತಿ ಮತ್ತು ಕುತೂಹಲವನ್ನು ಹುಟ್ಟಿಸಿತು.

ಶ್ರೇಯಸ್ ಕುರಡಗಿ, 6ನೇ ತರಗತಿ, ಬೆಂಗಳೂರು

